ಕರ್ನಾಟಕ ಸರ್ಕಾರ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ

## ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ.

Email ID:- dhochikballapur@gmail.com Phone & Fax: 08156-277099

ಸಂಖ್ಯೆ:ಜಿ.ರೋ.ಚಿ.ಪುರ/11/2025-26 ಇ-28562 ದಿನಾಂಕ:- 12-08-2025

## -:ಅಧಿಸೂಚನೆ:-

**ವಿಷಯ:** ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ 2025-26ನೇ ಸಾಲಿನ ಆರ್.ಓ.ಪಿ ಅಡಿಯಲ್ಲಿ ಅನುಮೋದನೆಯಾಗಿರುವ ಕೀಟ ಸಂಗ್ರಹಕ ಹುದ್ದೆಗೆ ನೇರ ಸಂದರ್ಶನ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ಅಭಿಯಾನ ನಿರ್ದೇಶಕರು ರಾಷ್ಟ್ರೀಯ ಆರೋಗ್ಯ ಅಭಿಯಾನ ಆಕುಕ ಸೇವೆಗಳು ಬೆಂಗಳೂರು ರವರ ಪತ್ರದ ಸಂಖ್ಯೆ:NVBDCP/ENT-7/2025-26 (e-1773616) Date:16-05-2025.
2. ದಿನಾಂಕ:08-07-2025ರಂದು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ನಡೆದ 82.11ನೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಸಭೆಯ ಅನುಮೋದನೆಯಂತೆ.
3. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ರವರ ಕಂಡಿಕೆ(05)ರ ಅನುಮೋದನೆಯಂತೆ.

* * * * *

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಲ್ಲೇಖಗಳನ್ವಯ ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ) ರವರ ಸುತ್ತೋಲೆ ಪತ್ರದ ಅನ್ವಯ (31/03/2026 ರ ಅಂತ್ಯದವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಮೋದನೆಯಾಗಿರುವ ಕೀಟ ಸಂಗ್ರಹಕ ಹುದ್ದೆಗೆ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇರ ಸಂದರ್ಶನ ಮೂಲಕ ನಿಯಮಾನುಸಾರ ಭರ್ತಿ ಮಾಡುವ ಬಗ್ಗೆ.

**ವಿಶೇಷ ಸೂಚನೆಗಳು:-**

- ಕೆಳಕಂಡ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿದ್ದು, ಕಿಯೋನಿಕ್ಸ್ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
- ಎನ್.ಹೆಚ್.ಎಂ ಅಡಿಯಲ್ಲಿ ಕೆಳಕಂಡ ಹುದ್ದೆಗೆ **ದಿನಾಂಕ: 21/08/2025** ರಂದು ಬೆಳಿಗ್ಗೆ 11:00ಕ್ಕೆ ನೇರ ಸಂದರ್ಶನಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಗೆ ಹಾಜರಾಗತಕ್ಕದ್ದು. ಸಂಜೆ 4 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ನೇರ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ಒಂದು ಸೆಟ್ ಜೆರಾಕ್ಸ್ (ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಢೀಕರಣ ಪ್ರತಿ {ಎಸ್.ಎಸ್.ಎಲ್.ಸಿ ಅಂಕ ಪಟ್ಟಿ} ಮತ್ತು ವಿಳಾಸ ದೃಢೀಕರಣ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ನಿಗಧಿತ ಸಮಯದೊಳಗಾಗಿ ಹಾಜರಾಗುವುದು.
- ಮೂಲ ದಾಖಲೆಗಳ ಪರಿಶೀಲಾನೆಗೆ ಮೂಲ ದಾಖಲೆಗಳು ಹಾಜರು ಪಡಿಸದೇ ಇದ್ದಲ್ಲಿ, ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇಲಾಖೆ ವತಿಯಿಂದ ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ನೀಡಲಾಗುವುದಿಲ್ಲ.

| Sl.N | Name Of The Position | NO. Of Posts | FMR Code& Salary as per ROP 2023-24 | Age (Maximum) | Qualification |
|---|---|---|---|---|---|
| 01 | Insect Collector | 1 | 8.1.13.20<br>Rs.15,114/-<br>NVBDCP | Not above 40 years as on date of Walk-in-interview | Qualification & Experience: Should have passed 2nd PUC / 12th Std in Science stream.<br>ಸದರಿ ಹುದ್ದೆಯು ಒಂದೆ ಹುದ್ದೆ ಆಗಿರುವುದರಿಂದ ಮೇರಿಟ್ ಆಧಾರದಲ್ಲಿ ನೇರ ಸಂದರ್ಶನ ಮೂಲಕ ಭರ್ತಿ ಮಾಡಲಾಗುವುದು. |

**ಷರತ್ತು & ನಿಬಂಧನೆಗಳು**

- ಈ ನೇಮಕಾತಿಯು ಎನ್.ಹೆಚ್.ಎಂ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿರ್ದಿಷ್ಟ ಅನ್ವಯ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ/ಪರಸ್ಪರ ವರ್ಗಾವಣೆಯಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.
- ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ನೇಮಕಾತಿ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಮಾತ್ರ ಹೊಂದಿರುತ್ತದೆ.
- ಸದರಿ ನೇಮಕಾತಿಗೆ ಸಂಬಂಧಿಸಿದ ವಿವರಗಳನ್ನು https://chikkaballapur.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.

**ಪ್ರತಿಯನ್ನು:-**

1. ಮಾನ್ಯ ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಆ.ಕು.ಕ ಸೇವೆಗಳು, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಆ.ಕು.ಕ ಸೇವೆಗಳು, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ) ಆ.ಕು.ಕ ಸೇವೆಗಳು, ಬೆಂಗಳೂರು ಅವಗಾಹನೆಗಾಗಿ ಸಲ್ಲಿಸಿದೆ.

4. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
5. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ಜಿಲ್ಲೆ, ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
6. ಮಾನ್ಯ ಸಹ ನಿರ್ದೇಶಕರು (ಎನ್.ವಿ.ಬಿ.ಡಿ.ಸಿ.ಪಿ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7. ಮಾನ್ಯ ಉಪ ನಿರ್ದೇಶಕರು, (ನೇತ್ರ) ಚಿಕ್ಕಬಳ್ಳಾಪುರ ಜಿಲ್ಲಾ ನೋಡಲ್ ಅಧಿಕಾರಿಗಳು, ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ ರವರ ಮಾಹಿತಿ ಹಾಗೂ ಅವಗಾಹನೆಗಾಗಿ ಸಲ್ಲಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
9. ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ರವರ ಮಾಹಿತಿಗಾಗಿ.
10. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ರವರ ಮಾಹಿತಿಗಾಗಿ.
11. ಹಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ರವರ ಮಾಹಿತಿಗೆ.
12. ಜಿಲ್ಲಾ ಕಾರ್ಯಕ್ರಮ/ಲೆಕ್ಕಪತ್ರ ವ್ಯವಸ್ಥಾಪಕರು, ಸಂಯೋಜಕರು, ಸಮಾಲೋಚಕರು ಚಿಕ್ಕಬಳ್ಳಾಪುರ ರವರ ಮಾಹಿತಿಗೆ.
13. ಕಚೇರಿ ಪ್ರತಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.